ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಖಾಅಬೇ-ಪಪೂಕಾ/ಹುಅನಿಬ/2007-08

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಸಂಪಿಗೆ ರಸ್ತೆ, ಬೆಂಗಳೂರು-12.
ದಿನಾಂಕ 25-11-2011

**ಸು ತ್ತೋ ಲೆ**

ವಿಷಯ:- ಅನುದಾನಿತ ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳಿಗೆ ಪದವಿ ಕಾಲೇಜುಗಳಿಂದ ಹಸ್ತಾಂತರಿಸಿರುವ ಖಾಲಿ ಉಪನ್ಯಾಸಕರ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡುವ ಸಂಬಂಧದಲ್ಲಿ ಹುದ್ದೆಗಳ ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಪತ್ರ ಸಂಖ್ಯೆ ಇಡಿ 145 ಯುಪಿಸಿ 2007 ದಿನಾಂಕ 07-08-2007.
2. ಸರ್ಕಾರದ ಪತ್ರ ಸಂಖ್ಯೆ ಇಡಿ 539 ಡಿಪಿಐ 2007 ದಿನಾಂಕ 15-12-2007.
3. ಈ ಕಛೇರಿ ಪತ್ರ, ದಿನಾಂಕ 19-09-2008.
4. ಸರ್ಕಾರದ ಆದೇಶ ಸಂಖ್ಯೆ ಇಡಿ 65 ಎಸ್ಒಹೆಚ್ 2008 ದಿನಾಂಕ 20-11-2008.
5. ದಿನಾಂಕ 12-08-2009 ರಂದು ಸಮಿತಿಯ ಸಭೆಯ ನಡವಳಿಗಳು.
6. ಈ ಕಛೇರಿಯ ಪತ್ರ, ದಿನಾಂಕ 02-09-2009.
7. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಂದ / ನಿರ್ದೇಶಕರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿದ ಬೋಧಕ ಹುದ್ದೆಗಳ ವಿವರಗಳು.
8. ದಿನಾಂಕ 04-01-2010 ರಂದು ನಡೆದ ಸಮಿತಿಯ ನಡವಳಿಗಳು.
9. ಈ ಕಛೇರಿಯ ಸಮ ಸಂಖ್ಯೆಯ ಪತ್ರ, ದಿನಾಂಕ 20-06-2011.
10. ಸರ್ಕಾರದ ಪತ್ರ ಸಂಖ್ಯೆ ಇಡಿ 30 ಟಿಪಿಯು 2010 ದಿನಾಂಕ 16-09-2011.

***

1) ಅನುದಾನಿತ 164 ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳಿಗೆ, ಕಾಲೇಜು ಶಿಕ್ಷಣ ಇಲಾಖೆಯು ವಿವಿಧ ಆದೇಶಗಳಲ್ಲಿ ಪದವಿ ಕಾಲೇಜುಗಳಲ್ಲಿರುವ ಒಟ್ಟು 702 ಖಾಲಿ ಉಪನ್ಯಾಸಕರ ಹುದ್ದೆಗಳನ್ನು ಪದವಿ ಪೂರ್ವ ಕಾಲೇಜುಗಳಿಗೆ ಹಸ್ತಾಂತರಿಸಿರುತ್ತದೆ. ಈ ರೀತಿ ಪದವಿ ಕಾಲೇಜುಗಳಿಂದ ಹಸ್ತಾಂತರಿಸಿರುವ 702 ಖಾಲಿ ಉಪನ್ಯಾಸಕರ ಹುದ್ದೆಗಳಲ್ಲಿ 44 ಪದವಿ ಪೂರ್ವ ಕಾಲೇಜುಗಳಲ್ಲಿನ 279 ಖಾಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಉಲ್ಲೇಖ-4ರ ಆದೇಶದಲ್ಲಿ ಅನುಮತಿ ನೀಡಿ ಆಡಳಿತಾತ್ಮಕ ಆದೇಶ ಹೊರಡಿಸಿದೆ.

...2

2) ಈ 702 ಖಾಲಿ ಉಪನ್ಯಾಸಕರ ಹುದ್ದೆಗಳಲ್ಲಿ ಕಾಲೇಜು ಶಿಕ್ಷಣ ಇಲಾಖೆಯು ಪತ್ರ ಸಂಖ್ಯೆ ಕಾಶಿಇ/85/ಇತರೆ/ಆಡಳಿತ/2009-10/ಖಾಕಾವಿ-1 ದಿನಾಂಕ 28-10-2010 ರಲ್ಲಿ ಒಟ್ಟು (118+305) 423 ಖಾಲಿ ಉಪನ್ಯಾಸಕರ ಹುದ್ದೆಗಳನ್ನು ಹಸ್ತಾಂತರಿಸಿದ್ದು, ಸದರಿ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರದ ಅನುಮತಿ ಕೋರಲಾಗಿತ್ತು. ಸರ್ಕಾರವು ಉಲ್ಲೇಖ-10ರ ಪತ್ರದಲ್ಲಿ, ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 282 ಮತ್ತು 401 ಉಪನ್ಯಾಸಕರ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡಿರುವ ಸರ್ಕಾರದ ದಿನಾಂಕ 12-04-2006 ಮತ್ತು 31-03-2008ರ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸಿರುವ ಕಾಲೇಜುಗಳಿಗೆ ಮಾತ್ರ ಹುದ್ದೆಗಳನ್ನು ತುಂಬಲು ಅವಕಾಶವಿರುತ್ತದೆ ಎಂದು ತಿಳಿಸಿರುತ್ತದೆ. ಮುಂದುವರೆದು ಸದರಿ ಷರತ್ತುಗಳನ್ನು ಪೂರೈಸಿರುವ ಹುದ್ದೆಗಳ ಮಾಹಿತಿಯನ್ನು ಹಾಗೂ ಅವುಗಳ ವಿವರಗಳನ್ನು ದೃಢೀಕರಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿದೆ.

3) ಈ ಹಿನ್ನೆಲೆಯಲ್ಲಿ ಪದವಿ ಕಾಲೇಜುಗಳಿಂದ ಪದವಿ ಪೂರ್ವ ಕಾಲೇಜುಗಳಿಗೆ ಹಸ್ತಾಂತರಿಸಿರುವ 423 ಹುದ್ದೆಗಳಿಗೆ ಸಂಬಂಧಿಸಿದ ಪದವಿ ಪೂರ್ವ ಕಾಲೇಜುಗಳಿಂದ ಸರ್ಕಾರವು ಕೋರಿರುವ ಮಾಹಿತಿಯನ್ನು ಪಡೆಯಲು ಚೆಕ್‌ಲಿಸ್ಟ್ ಮತ್ತು ಮೂಲಭೂತ ಸೌಲಭ್ಯಗಳ ಮೌಲ್ಯಮಾಪನ ಕುರಿತ ನಮೂನೆಯನ್ನು ಸಿದ್ಧಪಡಿಸಿ ಇದರೊಂದಿಗೆ ಲಗತ್ತಿಸಿದೆ. ಈ 423 ಹುದ್ದೆಗಳು ಇರುವ ಪ್ರತಿಯೊಂದು ಪದವಿ ಪೂರ್ವ ಕಾಲೇಜಿನವರು ಪ್ರತಿಯೊಂದು ಹುದ್ದೆಗೆ ಸಂಬಂದಿಸಿದಂತೆ ಚೆಕ್‌ಲಿಸ್ಟ್ ಹಾಗೂ ನಮೂನೆಯಲ್ಲಿ ಮಾಹಿತಿಯನ್ನು ತುಂಬಿ ಸಂಸ್ಥೆಯ ಅಧಿಕೃತ ಅಧಿಕಾರಿ, ಕಾಲೇಜಿನ ಪ್ರಾಚಾರ್ಯರು ದೃಢೀಕರಿಸಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯಾ ಜಿಲ್ಲಾ ಉಪ ನಿರ್ದೇಶಕರ ಮೂಲಕ ಮಾಹಿತಿಯನ್ನು ದಿನಾಂಕ **10-12-2011** ರೊಳಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,

ಗೆ,
ಪದವಿ ಕಾಲೇಜಿನಿಂದ ಬೇರ್ಪಟ್ಟ ಸಂಬಂಧಿಸಿದ ಪದವಿ ಪೂರ್ವ ಕಾಲೇಜುಗಳ ಆಡಳಿತ ಮಂಡಳಿಗೆ – ಕಾಲೇಜಿನ ಪ್ರಿನ್ಸಿಪಾಲರ ಮುಖಾಂತರ.

ಪ್ರತಿಗಳು:

1. ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ – 423 ಹುದ್ದೆಗಳಿಗೆ ಸಂಬಂಧಿಸಿದ ಮಾಹಿತಿಯುಳ್ಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪಟ್ಟಿಯಲ್ಲಿ ಕೆಲವು ವಿದ್ಯಾಸಂಸ್ಥೆಗಳ ಹೆಸರನ್ನು ಮಾತ್ರ ನಮೂದಿಸಲಾಗಿದೆ. ಆ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಯಾವ ಕಾಲೇಜಿಗೆ ಸಂಬಂಧಿಸಿದ ಹುದ್ದೆಯಾಗಿದೆ ಎಂಬುದನ್ನು ನಮೂದಿಸಿರುವುದಿಲ್ಲ, ಆದ್ದರಿಂದ ಸದರಿ ಪಟ್ಟಿಯಲ್ಲಿರುವ ನಿಮ್ಮ ಜಿಲ್ಲಾ ವ್ಯಾಪ್ತಿಯ ಸಂಬಂಧಿಸಿದ ಸಂಸ್ಥೆಗಳಿಗೆ ಈ ಮಾಹಿತಿಯನ್ನು ನೀಡಿ, ಸಂಬಂಧಿಸಿದ ಸಂಸ್ಥೆಗಳಿಂದ / ಕಾಲೇಜುಗಳಿಂದ ಮಾಹಿತಿಯನ್ನು ಪಡೆದು ಸಲ್ಲಿಸುವುದು.
2. ಸಂಬಂಧಿಸಿದ ಕಾಲೇಜುಗಳ ಪ್ರಿನ್ಸಿಪಾಲರಿಗೆ.
3. ಹೆಚ್ಚುವರಿ ಪ್ರತಿ.